## ಹಾಲು, ಮೊಟ್ಟೆ ಯೋಜನೆ ಫಲಶ್ರುತಿ

# ಅಪೌಷ್ಟಿಕ ಮಕ್ಕಳ ಸಂಖ್ಯೆ ಇಳಿಕೆ

**ಹೇಮಾ ವೆಂಕಟ್**

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ (ಐಸಿಡಿಎಸ್) ಅಂಗನವಾಡಿ ಮಕ್ಕಳಿಗೆ ಕ್ಷೀರಭಾಗ್ಯ ಮತ್ತು ಮೊಟ್ಟೆ ನೀಡುವ ಸರ್ಕಾರದ ಯೋಜನೆಯ ಫಲವಾಗಿ ರಾಜ್ಯದಲ್ಲಿ ಅಪೌಷ್ಟಿಕ ಮಕ್ಕಳ ಸಂಖ್ಯೆಯಲ್ಲಿ ಇಳಿಕೆ ಕಂಡುಬಂದಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಂಕಿ ಅಂಶದ ಪ್ರಕಾರ 2013ರ ಮಾರ್ಚ್ ತಿಂಗಳಲ್ಲಿ ಶೇಕಡ 1.32 (51,453) ಇದ್ದ ಅಪೌಷ್ಟಿಕ ಮಕ್ಕಳ ಪ್ರಮಾಣ 2014ರ ಜೂನ್ ಅಂತ್ಯಕ್ಕೆ ಶೇ 0.82 (32,952)ಕ್ಕೆ ಇಳಿದಿದೆ.

ಆದರೆ, ಬೆಂಗಳೂರು ನಗರ ಸೇರಿದಂತೆ ಹೆಚ್ಚು ಕೊಳೆಗೇರಿಗಳಿರುವ ನಗರ ಪ್ರದೇಶದಲ್ಲಿ ಅಂಥ ಬದಲಾವಣೆ ಕಂಡುಬಂದಿಲ್ಲ. ಇದಕ್ಕೆ ಪೋಷಕರ ನಿರ್ಲಕ್ಷ್ಯವೂ ಕಾರಣ ಎಂದು ಅಧಿಕಾರಿಗಳು ಹೇಳುತ್ತಾರೆ.

ಅಂಗನವಾಡಿಗಳಲ್ಲಿ 1ರಿಂದ 6 ವರ್ಷದೊಳಗಿನ ಮಕ್ಕಳಿಗೆ ಪೌಷ್ಟಿಕ ಆಹಾರದ ಜೊತೆಗೆ ಹಾಲು, ಮೊಟ್ಟೆ ನೀಡುವ ಯೋಜನೆಗೆ 2013ರ ಆಗಸ್ಟ್ 1ರಂದು ಸರ್ಕಾರ ಚಾಲನೆ ನೀಡಿತ್ತು. ಯೋಜನೆಯಂತೆ ವಾರದಲ್ಲಿ ಮೂರು ದಿನ ಪ್ರತಿ ಮಗುವಿಗೆ 150 ಮಿಲಿ ಲೀಟರ್ ಹಾಲು ನೀಡಲಾಗುತ್ತಿದೆ. ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳನ್ನು ಗುರುತಿಸಿ ವಾರದಲ್ಲಿ ಮೂರು ದಿನ ಮೊಟ್ಟೆ ನೀಡಲಾಗುತ್ತಿದೆ. ಮೊಟ್ಟೆ ತಿನ್ನದ ಮಕ್ಕಳಿಗೆ ಆರು ದಿನವೂ ಹಾಲು ನೀಡಲಾಗುತ್ತಿದೆ.

ಅಪೌಷ್ಟಿಕ ಮಕ್ಕಳ ಸಂಖ್ಯೆಯಲ್ಲಿ ಗಮನಾರ್ಹ ಇಳಿಕೆ ಕಂಡುಬರದ ಬೀದರ್, ಗುಲ್ಬರ್ಗಾ, ಯಾದಗಿರಿ, ಕೊಪ್ಪಳ, ರಾಯಚೂರು ಜಿಲ್ಲೆಗಳಲ್ಲಿ ಎಲ್ಲ ದಿನವೂ ಹಾಲು, ಮೊಟ್ಟೆ ಎರಡನ್ನೂ ನೀಡಲಾಗುತ್ತಿದೆ ಎಂದು ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

### ‘ಪ್ರತಿ ಅಂಗನವಾಡಿಯಿಂದ ಮಾಹಿತಿ’

‘ಯೋಜನೆಯ ಸಮರ್ಪಕ ಅನುಷ್ಠಾನದ ನಿಟ್ಟಿನಲ್ಲಿ, ಎಲ್ಲ ಅಂಗನವಾಡಿಗಳಿಂದ ಪ್ರತಿ ತಿಂಗಳು ಅಪೌಷ್ಟಿಕ ಮಕ್ಕಳ ಅಂಕಿಅಂಶವನ್ನು ಇಲಾಖೆ ತರಿಸಿಕೊಳ್ಳುತ್ತಿದೆ. ಹಾಗೆಯೇ ಹಾಲು ಮತ್ತು ಮೊಟ್ಟೆ ಎಲ್ಲ ಮಕ್ಕಳಿಗೆ ಸಮರ್ಪಕವಾಗಿ ತಲುಪುವ ಬಗ್ಗೆ ಮಕ್ಕಳ ಪೋಷಕರಿಂದಲೇ ಮಾಹಿತಿ ಪಡೆಯಲಾಗುತ್ತಿದೆ. ಮಕ್ಕಳ ಆರೋಗ್ಯದ ಮೇಲೆ ನಿಗಾ ಇಡುವುದರ ಜೊತೆಗೆ ಅಂಗನವಾಡಿ ನೌಕರರ ಮೇಲೂ ನಿಗಾ ಇಡಲಾಗಿದೆ ಕೆಲ ಮಕ್ಕಳು ಆರೋಗ್ಯವಂತರಿದ್ದರೂ ತೂಕ ಕಡಿಮೆ ಇರುತ್ತಾರೆ. ಹುಟ್ಟುತ್ತಲೇ ಹೃದ್ರೋಗವಿರುವ ಮಕ್ಕಳು ಮತ್ತು ಮಾನಸಿಕ ಅಸ್ವಸ್ಥ ಮಕ್ಕಳು ತೂಕ ಕಡಿಮೆ ಇರುತ್ತಾರೆ. ಜ್ವರ, ಅತಿಸಾರದಂಥ ಕಾಯಿಲೆಗೆ ತುತ್ತಾಗಿ ತೂಕ ಕಡಿಮೆಯಾದವರು ಇವರೆಲ್ಲರೂ ಒಂದೇ ಗುಂಪಿನಲ್ಲಿ ಬರುತ್ತಾರೆ. ಹಾಗಾಗಿ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳ ಸಂಖ್ಯೆ ಇನ್ನೂ ಕಡಿಮೆ ಇದೆ ’ ಎನ್ನುತ್ತಾರೆ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಜಂಟಿ ನಿರ್ದೇಶಕ ಓಬಳೇಶಪ್ಪ.

**ಅಪೌಷ್ಟಿಕ ಮಟ್ಟ ಇಳಿಕೆಯ ಅಂಕಿಅಂಶ**

| ಜಿಲ್ಲೆ | 2013 ಮಾರ್ಚ್ (ಶೇ) | 2014 ಜೂನ್ (ಶೇ) |
|---|---|---|
| ಕೊಪ್ಪಳ | 3.01 | 2.52 |
| ಧಾರವಾಡ | 2.62 | 1.29 |
| ಗದಗ | 2.48 | 1.31 |
| ರಾಯಚೂರು | 2.05 | 1.64 |
| ಬಳ್ಳಾರಿ | 1.97 | 0.91 |
| ಬೆಂಗಳೂರು ನಗರ | 1.53 | 0.96 |
| ಬೆಳಗಾವಿ | 1.22 | 0.80 |
| ದಾವಣಗೆರೆ | 1.19 | 0.65 |
| ಬಾಗಲಕೋಟೆ | 1.11 | 0.56 |
| ಒಟ್ಟು | 1.32 | 0.82 |

ಅಪೌಷ್ಟಿಕತೆಯನ್ನು ಹೋಗಲಾಡಿಸಲು ಪೌಷ್ಟಿಕ ಆಹಾರ ನೀಡುವುದರ ಜೊತೆಗೆ ಅಂತಹ ಮಕ್ಕಳಿಗೆ ಚಿಕಿತ್ಸೆ ನೀಡುವುದಕ್ಕಾಗಿ ಬಾಲಸಂಜೀವಿನಿ ಯೋಜನೆಯನ್ನು ಜಾರಿಗೆ ತರಲಾಗಿದೆ. ಈ ಯೋಜನೆಯಲ್ಲಿ ಪ್ರತಿ ಎರಡು ತಿಂಗಳಿಗೊಮ್ಮೆ ಅಂಗನವಾಡಿ ಮಕ್ಕಳ ಆರೋಗ್ಯ ತಪಾಸಣೆ ನಡೆಸಲಾಗುತ್ತದೆ.

ಅನಾರೋಗ್ಯ ಲಕ್ಷಣಗಳು ಕಂಡು ಬಂದರೆ ₹750ವರೆಗೂ ಔಷಧಿ ವೆಚ್ಚವನ್ನು ಸರ್ಕಾರ ಭರಿಸುತ್ತಿದೆ. ಅನಾರೋಗ್ಯಪೀಡಿತ ನವಜಾತ ಶಿಶುವಿನ ಚಿಕಿತ್ಸೆಗೆ ₹50 ಸಾವಿರ ಮತ್ತು ಒಂದು ವರ್ಷ ಮೇಲ್ಪಟ್ಟ ಮಗುವಿಗೆ ₹35 ಸಾವಿರದಂತೆ ಚಿಕಿತ್ಸಾ ವೆಚ್ಚ ಭರಿಸುತ್ತಿದೆ. ಈ ಯೋಜನೆಗೆ ₹20 ಕೋಟಿ ಅನುದಾನ ಮೀಸಲಿಡಲಾಗಿದೆ ಎಂದು ಇಲಾಖೆಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಬಾಲಸಂಜೀವಿನಿ ಯೋಜನೆಯಡಿ ನ್ಯುಮೋನಿಯಾ, ಮಲೇರಿಯಾ, ರಕ್ತಹೀನತೆ, ಮಧುಮೇಹ, ಕಿಡ್ನಿ ಸಮಸ್ಯೆ, ಯಕೃತ್ ತೊಂದರೆ, ನರ ಸಂಬಂಧಿ ಸಮಸ್ಯೆ, ಅಪೌಷ್ಟಿಕತೆ, ಅತಿಸಾರ, ಹೃದಯ ಸಂಬಂಧಿ ರೋಗ, ಸೋಂಕು ಮುಂತಾದ ತೀವ್ರತರ ಕಾಯಿಲೆಗಳನ್ನು ಗುರುತಿಸಲಾಗಿದೆ. ಮಕ್ಕಳಲ್ಲಿರುವ ನ್ಯೂನತೆಯನ್ನು ಪತ್ತೆ ಹಚ್ಚಿ ಪೂರಕ ಔಷಧಿ ನೀಡಿರುವುದು ಅಪೌಷ್ಟಿಕ ಮಕ್ಕಳ ಸಂಖ್ಯೆ ಇಳಿಮುಖವಾಗಲು ಕಾರಣವಾಗಿದೆ ಎಂದು ಅಧಿಕಾರಿಗಳು ಹೇಳುತ್ತಾರೆ.

2012ರಲ್ಲಿ ಹೈಕೋರ್ಟ್ ನ್ಯಾಯಮೂರ್ತಿ ಎನ್.ಕೆ.ಪಾಟೀಲ್ ನೇತೃತ್ವದ ಸಮಿತಿಯು ಮಕ್ಕಳ ಅಪೌಷ್ಟಿಕತೆ ತಡೆಯುವ ಕುರಿತು ವರದಿ ಸಲ್ಲಿಸಿತ್ತು. ಈ ವರದಿ ಬಂದ ನಂತರ ಎಚ್ಚೆತ್ತುಕೊಂಡ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಲು, ಮೊಟ್ಟೆ ನೀಡುವ ಯೋಜನೆ ಜಾರಿಗೊಳಿಸಿತ್ತು.